**Spl.C.5092/2021**
**PW.4 CW.4 Gowri**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 4**

**ಚಾಸಾ – 4**

ಸಾಕ್ಷಿಯ ಹೆಸರು – ಶ್ರೀಮತಿ ಗೌರಿ
ಗಂಡನ ಹೆಸರು – ಮಂಜು
ವಯಸ್ಸು – 31 ವರ್ಷ
ವೃತ್ತಿ – ಕೂಲಿ
ವಿಳಾಸ – ನಾಲ್ಕೇರಿ ಬಣ್ಣನಮಟ್ಟೆ

ದಿಃ 21.08.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಪ್ರಾಸಾ 1 ನನ್ನ ಭಾವ, ಪ್ರಾಸಾ 2 ಗಂಡ, ಪ್ರಾಸಾ 3 ನನ್ನ ಅಕ್ಕ. ಚಾಸಾ 5 ಗಣಪತಿ ನನ್ನ ಸಾಹುಕಾರರು. ನ್ಯಾಯಾಲಯದಲ್ಲಿರುವ ಎಲ್ಲಾ ಆರೋಪಿಗಳ ಪರಿಚಯ ಇದೆ.

2. ನಾವು ಯರವ ಜಾತಿಗೆ ಸೇರಿದ್ದೇವೆ. ಆರೋಪಿತರು ಕೊಡವ ಜಾತಿಯವರು. ಮೂರು ವರ್ಷದ ಹಿಂದೆ ಸಂಜೆ 4.30 ಗಂಟೆಯಲ್ಲಿ ನಾನು ಮನೆಯಲ್ಲಿದ್ದೆ. ರಸ್ತೆಯಲ್ಲಿ ಗಲಾಟೆಯ ಶಬ್ದ ಕೇಳಿ ಅಲ್ಲಿಗೆ ಹೋದಾಗ ಆರೋಪಿತರು ಪ್ರಾಸಾ 1 ಮತ್ತು 2 ರವರಿಗೆ ಹಲ್ಲೆ ಮಾಡುತ್ತಿದ್ದರು. ನಾವು ಬಿಡಿಸಲು ಹೋದಾಗ ನನಗೆ ಎದಗೆ ಒದ್ದರು, ಅವಾಚ್ಯ ಶಬ್ದಗಳಿಂದ ಸೂಳೆ ಮುಂಡೆ ಎಂದು ಬೈದರು. ನಂತರ ಮನೆಗೆ ಹೋಗಿದ್ದೇವೆ, ಕುಟ್ಟ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇವೆ. ಪ್ರಕರಣ ದಾಖಲಾಗಿದೆ, ಪೊಲೀಸರು ವಿಚಾರಣೆ ಮಾಡಿದ್ದಾರೆ ಹಾಗೂ ನಾನು ಹೇಳಿದ್ದೇನೆ.

ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ, ಹೇಳಿಕೆಯನ್ನು **ನಿಪಿ 7, 7(ಎ)** ನನ್ನ ಸಹಿ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

3. ಪ್ರಾಸಾ 1, 2 ಹಾಗೂ ಚಾಸಾ 5 ರವರು ಆಟೋದಲ್ಲಿ ಬರುವಾಗ ಒಂದನೇ ಆರೋಪಯ ಅಂಗಡಿಯ ಮುಂದಿನ ರಸ್ತೆಯಲ್ಲಿ ಆಟೋವನ್ನು ಅಡ್ಡ ಹಾಕಿ ಆರೋಪಿತರು ಪ್ರಾಸಾ 1 ಮತ್ತು 2 ರವರನ್ನು ಹಲ್ಲೆ ಮಾಡಿ, ಯರವ ಜಾತಿಯವರು ನಿಂದನೆ ಮಾಡಿ, ನಮ್ಮ ಮಾನಕ್ಕೆ ಚ್ಯುತಿ ಉಂಟು ಮಾಡಿದ್ದಾರೆ ಎಂದರೆ ಸರಿ. ಚಾಸಾ 6 ರವರು ಜಗಳ ಬಿಡಿಸಿದ್ದರು ಎಂದರೆ ಸರಿ. ನಿಪಿ 3 ರಲ್ಲಿ ಕಾಣುವಂತಹ ಜಾಗ ಘಟನಾ ಜಾಗ.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ**

4. ನನ್ನ ಗಂಡ ಹಾಗೂ ರವಿರವರು ಜಗಳ ಮಾಡಿಕೊಂಡಿದ್ದ ವಿಚಾರ ಗೊತ್ತಿರುವುದಿಲ್ಲ. ರವಿರವರು ಘಟನಾ ಸ್ಥಳದಲ್ಲಿ ಇರಲಿಲ್ಲ. ನಮ್ಮ ಮನೆಯಿಂದ ಪ್ರಾಸಾ 3 ರವರ ಮನೆ 500 ಮೀ ದೂರದಲ್ಲಿ ಇದೆ. ಬನ್ನಮಟ್ಟೆ ರಸ್ತೆಯಲ್ಲಿ ಗಲಾಟೆ ನಡೆದಿದೆ. ಗಲಾಟೆಯಲ್ಲಿ ನನಗೆ ರಕ್ತ ಬಂದಿದೆ. ನನಗೆ ಎಲ್ಲಾ ಆರೋಪಿತರು ಒಟ್ಟಿಗೆ ಹಲ್ಲೆ ಮಾಡಿದ್ದಾರೆ. ನನ್ನ ಬಟ್ಟೆಗೆ ರಕ್ತ ಸುರಿದಿರುತ್ತದೆ. ಘಟನಾ ಸ್ಥಳದಲ್ಲಿ ಮಳೆ ಬಿಳುತ್ತಿತ್ತು, ನನ್ನ ಬಟ್ಟೆಗೆ ಮಣ್ಣಾಗಿತ್ತು, ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೆ. ನಾವು ಹೋದಾಗ ಪ್ರಾಸಾ 1 ಮತ್ತು 2 ರವರನ್ನು ಬನ್ನಮಟ್ಟೆ ರಸ್ತೆಯಲ್ಲಿ ಹಲ್ಲೆ ಮಾಡುತ್ತಿದ್ದರು. ಎಲ್ಲಾ ಆರೋಪಿತರು

ಪ್ರಾಸಾ 1 ಮತ್ತು 2 ರವರಿಗೆ ಹಲ್ಲೆ ಮಾಡಿದ್ದಾರೆ. ಪ್ರಾಸಾ 1 ಮತ್ತು 2 ರವರಿಗೆ ರಕ್ತ ಬಂದಿತ್ತು, ರಕ್ತ ಸೋರಿತ್ತು, ಅವರ ಬಟ್ಟೆ ರಕ್ತ ಆಗಿತ್ತು, ನೆಲಕ್ಕೂ ಸೋರಿತ್ತು. ಎಷ್ಟು ಸಮಯ ಘಟನೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಬಂದರೋ ಇಲ್ಲವೋ ಗೊತ್ತಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ. ಆಸ್ಪತ್ರೆಗೆ ಹೋದ ದಿನ ಗೊತ್ತಿಲ್ಲ. ಘಟನೆಯಾದ ಎಷ್ಟು ದಿನಕ್ಕೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಹಾಗೂ ಏನು ಹೇಳಿದ್ದೇನೆ ಎಂದು ಗೊತ್ತಿಲ್ಲ.

5. ಚಾಸಾ 5 ರವರು ಒಂದನೇ ಆರೋಪಿಯ ದೊಡ್ಡಪ್ಪ. ಅವರ ನಡುವೆ ಹೊಂದಾಣಿಕೆ ಇಲ್ಲ. ಆಸ್ತಿ ವಿವಾದ ಇರುವುದು ಗೊತ್ತಿರುವುದಿಲ್ಲ. ಸಾಹುಕಾರರು ಹೇಳಿದಂತೆ ಕೇಳುತ್ತೇವೆ. ಆದರೆ ಕೆಲಸ ಹೇಳಿದಂತೆ ಮಾತ್ರ ಮಾಡುತ್ತೇವೆ. ಚಾಸಾ 5 ರವರು ಹೇಳಿದಂತೆ ಪೊಲೀಸರಿಗೆ, ನ್ಯಾಯಾಲಯದಲ್ಲಿ ಆರೋಪಿತರ ವಿರುದ್ಧ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಆ ದಿನ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿಲ್ಲ, ಮಾನಕ್ಕೆ ಚ್ಯುತಿ ತಂದಿಲ್ಲ ಹಾಗೂ ಬೈದಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)